ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 05-07-2017

# ಪತ್ರಿಕಾ ಆಮಂತ್ರಣ

**1. ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನರಾಂ ರವರ 31 ನೇ ಪುಣ್ಯ ಸ್ಮರಣೆ:**

**ಪ್ರತಿಮೆಗೆ ಮಾಲಾರ್ಪಣೆ:**

**ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.**

**ಉಪಸ್ಥಿತರು:**

**ಹೆಚ್. ಆಂಜನೇಯ,**

**ಸಮಾಜ ಕಲ್ಯಾಣ ಹಾಗೂ ಹಿಂದುಳಿವ ವರ್ಗಗಳ ಕಲ್ಯಾಣ ಸಚಿವರು.**

ದಿನಾಂಕ: 06–07–2017 ಗುರುವಾರ, ಸಮಯ : ಬೆಳಿಗ್ಗೆ 10.00 ಗಂಟೆಗೆ

**ಸ್ಥಳ: ವಿಧಾನಸೌಧದ ಪಶ್ಚಿಮದ್ವಾರ, ಬೆಂಗಳೂರು.**

**2. ಪತ್ರಿಕಾಗೋಷ್ಠಿ:**

ಅಧ್ಯಕ್ಷರು,
ಕರ್ನಾಟಕ ಹಿಂದುಳಿದ ವರ್ಗದ ಅಧ್ಯಕ್ಷರು,

ದಿನಾಂಕ: 06–07–2017 ಗುರುವಾರ, ಸಮಯ: 11–30 ಗಂಟೆಗೆ

ಸ್ಥಳ: ಡಿ. ದೇವರಾಜು ಅರಸು ಭವನ, ಎರಡನೇ ಮಹಡಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಭಾಂಗಣ, ಬೆಂಗಳೂರು.

**3. 2017 ರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ ಪರಿಶೀಲಿಸಲು ವಿಧಾನಸಭಾ ಸದಸ್ಯ ಕೆ.ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯ ಪ್ರಾರಂಭಿಕ ಸಭೆ.**

ದಿನಾಂಕ: 06-07-2017 ಗುರುವಾರ ಸಮಯ: ಬೆಳಿಗ್ಗೆ 11.30 ಗಂಟೆಗೆ.

ಸ್ಥಳ: ಕೊಠಡಿ ಸಂಖ್ಯೆ 106, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ನಗರಕ್ಕೆ ರಾಷ್ಟ್ರಪತಿ ಆಗಮನ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

ಭಾರತದ ಘನತೆವೆತ್ತ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಇಂದು ಮಧ್ಯಾಹ್ನ ಹೆಚ್.ಎ.ಎಲ್. ವಿಮಾನ ನಿಲ್ದಾಣ ಆಗಮಿಸಿದರು.

ಈ ಸಂದರ್ಭದಲ್ಲಿ ರಾಜ್ಯಪಾಲ ವಾಜುಭಾಯಿ ವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ. ಜೆ. ಜಾರ್ಜ್ ಹಾಗೂ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ ಅವರು ರಾಷ್ಟ್ರಪತಿ ಬರಮಾಡಿಕೊಂಡರು.

ಎಸ್‌ಎಂ:ಜೆಡಿ:ಜಿಪಿಆರ್.

# ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಕೈಗಾರಿಕೋದ್ಯಮಿಗಳಿಗೆ ಅಭಿನಂದನೆ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

ಭಾರತ ಸರ್ಕಾರದಿಂದ ಪುರಸ್ಕೃತಗೊಂಡ ಕರ್ನಾಟದ ಮೂವರು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಂಗವಿಕಲ ಕೈಗಾರಿಕೋದ್ಯಮಿಗಳಾದ ಪಾಟೀಲ್ ಅರುಣ್ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, **CADMAXX,** ಪಿ. ಗುಣಶೇಖರ್, ಮಾಲೀಕರು, **M/s**

**P.P. Enterprises,** ಡಿ. ಟಿ. ವೆಂಕಟೇಶ್ ಗ್ರೋವೆ, **CNC System** ಸಂಸ್ಥೆಯ ಮಾಲೀಕರು ಇವರುಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ಇಂದು ಸನ್ಮಾನಿಸಲಾಯಿತು.

ಕೈಗಾರಿಕೆ ಮತ್ತು ಮಾಣಿಜ್ಯ ಇಲಾಖೆಯ ಅಪರ ನಿರ್ದೇಶಕರಾದ ಎಂ.ಎನ್. ಕರೂರ್ ಅವರು ಮಾತನಾಡಿ ಕೇಂದ್ರ ಸರ್ಕಾರಕ್ಕೆ ಪ್ರಶಸ್ತಿಗಾಗಿ ಒಟ್ಟು 35 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ ಕರ್ನಾಟಕದ ಮೂವರು ಪ್ರಶಸ್ತಿಗೆ ಆಯ್ಕೆಯಾಗಿರುವುದು ಅವರ ಶ್ರಮ ಮತ್ತು ಅವರ ಸಾಧನೆಯನ್ನು ತೋರಿಸುತ್ತದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಾಧನೆ ಮಾಡಲಿ ಎಂದು ಅವರು ಶುಭ ಹಾರೈಸಿದರು.

ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಮೂವರು ಕೈಗಾರಿಕೋದ್ಯಮಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಪಿಎಸ್ಐ.

## 46 ನೇ ವಾರ್ಷಿಕ ಕಲಾ ಪ್ರದರ್ಶನ ಉದ್ಘಾಟನೆ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿಯು ಜುಲೈ 5 ರಂದು ಬೆಳಿಗ್ಗೆ 11.00 ಗಂಟೆಗೆ ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 46ನೇ ವಾರ್ಷಿಕ ಕಲಾ ಪ್ರದರ್ಶನವನ್ನು ಹಮ್ಮಿಕೊಂಡಿತ್ತು.

ಈ ಕಲಾ ಪ್ರದರ್ಶನದ ಉದ್ಘಾಟನೆಯನ್ನು ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಆಧ್ಯಕ್ಷ ಪ್ರೊ. ಎಸ್. ಜಿ. ಸಿದ್ಧರಾಮಯ್ಯ ಅವರು ನೆರವೇರಿಸಿ ಮಾತನಾಡಿ ಇಂತಹ ಕಲೆಯನ್ನು ನೋಡುವುದು ಒಂದು ಧ್ಯಾನ ಹಾಗೂ ಪುಸ್ತಕವನ್ನು ಒದುವುದು ಒಂದು ಧ್ಯಾನ ಎಂದರು.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಿ. ಎನ್. ಮಂಜುನಾಥ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ ರಾಜ್ಯದ ಪತ್ರಿಯೊಂದು ಕಾಲೇಜಿನಲ್ಲೂ ಲಲಿತಕಲಾ ವಿಭಾಗವನ್ನು ಪ್ರಾರಂಭಿಸಬೇಕೆಂದು ಅಭಿಪ್ರಾಯ ಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಲಲಿಕಲಾ ಅಕಾಡೆಮಿಯ ಅಧ್ಯಕ್ಷ ಡಾ. ಎಂ. ಎಸ್. ಮೂರ್ತಿ ಅವರು ವಹಿಸಿದ್ದರು.

ಎಸ್ಎಂ:ಜೆಡಿ:ಜಿಪಿಆರ್.

# ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುನ್ನುಗ್ಗುವಂತೆ ಯುವ ಪೀಳಿಗೆಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಕರೆ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

**ವೈಜ್ಞಾನಿಕ ಸಂಶೋಧನೆಗಳಿಗೆ ಹೆಚ್ಚು ಪ್ರಾಶಸ್ತ್ಯಕೊಟ್ಟು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುನ್ನುಗ್ಗುವಂತೆ ಯುವ ಪೀಳಿಗೆಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಕರೆ ನೀಡಿದರು.**

**ಅವರು ಇಂದು ಭಾರತೀಯ ವಿಜ್ಞಾನ ಸಂಸ್ಥೆಯ ಜೆ.ಎನ್. ಟಾಟಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಸಂಸ್ಥೆಯ 2017 ರ ಘಟಿಕೋತ್ಸವ ಸಮಾರಂಭದಲ್ಲಿ ಘಟಿಕೋತ್ಸವ ಭಾಷಣ ಮಾಡಿದರು.**

**ಈ ವಿದ್ಯಾರ್ಥಿಗಳು ಸಾಕಷ್ಟು ಪರಿಶ್ರಮದಿಂದ ಪದವಿ ಪಡೆದಿದ್ದಾರೆ. ತಮ್ಮ ಮುಂದಿನ ಭವಿಷ್ಯದ ಬಗ್ಗೆ ನೂರಾರು ಕನಸುಗಳನ್ನು ಹೊಂದಿದ್ದಾರೆ. ಅವರೆಲ್ಲರ ಬದುಕು ಉಜ್ವಲವಾಗಲಿ ಎಂದು ಶುಭ ಹಾರೈಸಿದರು.**

**ಭಾರತೀಯ ವಿಜ್ಞಾನ ಸಂಸ್ಥೆ 108 ವರ್ಷಗಳ ಇತಿಹಾಸ ಹೊಂದಿಗೆ. ಜೆ.ಎನ್. ಟಾಟಾ, ಮೈಸೂರು ಮಹಾರಾಜರು ಹಾಗೂ ಕೇಂದ್ರ ಸರ್ಕಾರ ಈ ಸಂಸ್ಥೆಯ ಬೆಳವಣಿಗೆ ಪ್ರೋತ್ಸಾಹ ನೀಡಿದವರು. ಕಳೆದ 2 ವರ್ಷಗಳಲ್ಲಿ ಈ ಸಂಸ್ಥೆ ಸಾಕಷ್ಟು ಬೆಳೆದು ನಿಂತಿದೆ. ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತಿದೆ ಎಂದರು.**

**ನಮ್ಮದು ಹೆಚ್ಚು ಯುವಜನರನ್ನು ಹೊಂದಿರುವ ರಾಷ್ಟ್ರ. ಅವರೇ ನಮ್ಮ ದೇಶದ ಸಂಪತ್ತು. ಶೈಕ್ಷಣಿಕ, ಔದ್ಯೋಗಿಕವಾಗಿ ಅವರು ಹೆಚ್ಚಿನ ಸಾಧನೆ ಮಾಡಬೇಕು. ಕೌಶಲ್ಯ ಅಭಿವೃದ್ಧಿ ಕ್ಷೇತ್ರದಲ್ಲಿ 500 ಮಿಲಿಯನ್ ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಯುವ ಮನಸ್ಸುಗಳಿಗೆ ಸ್ಫೂರ್ತಿ ತುಂಬಲು ಶಿಕ್ಷಕರಿಂದ ಮಾತ್ರ ಸಾಧ್ಯ. ಶಿಕ್ಷಕರು ಕೇವಲ ಜ್ಞಾನರ್ಜನೆಗೆ ಮಾತ್ರ ಮೀಸಲಿರದೆ ವಿದ್ಯಾರ್ಥಿಗಳಿಗೆ ಸವಾಲುಗಳನ್ನು ಎದುರಿಸುವ ಮಾರ್ಗಗಳನ್ನು ತಿಳಿಹೇಳಬೇಕು. ಈ ಜಗತ್ತಿನ ನೈಜ ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ಆತ್ಮಸ್ಥೈರ್ಯವನ್ನು ವಿದ್ಯಾರ್ಥಿಗಳಲ್ಲಿ ತುಂಬಬೇಕು. ಇಂದು ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಸವಾಲುಗಳನ್ನು ಯುವಕ ಯುವತಿಯುರು ಆರಿತುಕೊಳ್ಳಬೇಕು. ಈ ಸಂಸ್ಥೆಯಲ್ಲಿ 2500 ಜನ ಡಾಕ್ಟರೇಟ್ ಪಡೆದಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.**

**ಮೂಲ ವಿಜ್ಞಾನದಲ್ಲಿ ಹೆಚ್ಚು ಸಂಶೋಧನೆಗಳನ್ನು ನಡೆಸಬೇಕು. ಇದಕ್ಕೆ ಹೆಚ್ಚು ಬಂಡವಾಳದ ಅಗತ್ಯತೆಯೂ ಇದೆ. ವಿಜ್ಞಾನ ಹಾಗೂ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಹಚ್ಚು ಬೇಡಿಕೆಯಿದೆ. ಐ.ಐಟಿ. ಅಥವಾ ಐ.ಐ.ಎಸ್.ಸಿ. ಯಲ್ಲಿ ಶಿಕ್ಷಣ ಪಡೆದವರು ಹೆಚ್ಚು ಬುದ್ಧಿಮತ್ತೆಯನ್ನು ಹೊಂದಿ ಸಮಸ್ಯೆಗಳನ್ನು ಬೇಗ ಪರಿಹರಿಸಬಲ್ಲರು ಎಂಬ ನಂಬಿಕೆಯಿದೆ. ಭಾರತದ ಶ್ರೇಷ್ಠ ವಿಜ್ಞಾನಿಗಳಾದ ಖುರಾನ, ಸಿ.ಎನ್.ಆರ್. ರಾವ್, ಇಂಜಿನಿಯರ್ ವಿಶ್ವೇಶ್ವರಯ್ಯ, ಅವರುಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಭಾರತೀಯರು ಯಾರಿಗೂ ಕಡಿಮೆ ಇಲ್ಲ. ಎಲ್ಲೆಡೆಯೂ ನಮ್ಮವರು ಉದ್ಯೋಗದಲ್ಲಿ ಉನ್ನತಿ ಹೊಂದಿದ್ದಾರೆ ಎಂದರಲ್ಲದೆ ತಾವು**

ಈ ಐದು ವರ್ಷಗಳಲ್ಲಿ 114 ಸಂಸ್ಥೆಗಳಿಗೆ ಭೇಟಿ ನೀಡಿರುವುದಾಗಿ ತಿಳಿಸಿದರು. ತಾವು 13 ನೇ ರಾಷ್ಟ್ರಪತಿಯಾಗಿ ಇದು ಕೊನೆಯ ಭೇಟಿಯಾದರೂ, ಮುಂದೆಯೂ ಈ ಸಂಸ್ಥೆಯೊಂದಿಗೆ ಆತ್ಮೀಯ ಸಂಬಂಧ ಹೊಂದುವುದಾಗಿ ತಿಳಿಸಿ, ಈ ಸಂಸ್ಥೆ 5 ನೇ ಶ್ರೇಷ್ಠ ಸಂಸ್ಥೆಯಾಗಿ ಹೊರಹೊಮ್ಮಿದೆ. ಇನ್ನೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಒಳ್ಳೆಯ ಶಿಕ್ಷಣ ವ್ಯವಸ್ಥೆಗೆ ಶ್ರದ್ಧೆಯುಳ್ಳ ಶಿಕ್ಷಕರು ಅವಶ್ಯಕತೆ ಒದೆ. ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಯನ್ನು ಪರಿಣಾಮಕಾರಿಯಾಗಿ ತಿಳಿಸುವವನೇ ಉತ್ತಮ ಶಿಕ್ಷಕ. ಇಲ್ಲವಾದಲ್ಲಿ ಗಣಕಯಂತ್ರಕ್ಕೂ ಶಿಕ್ಷಕರಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಶಿಕ್ಷಕನು ವಿದ್ಯಾರ್ಥಿಗಳ ಜೀವನಕ್ಕೆ ಒಂದು ಆಕಾರ ನೀಡಿ ಅವರನ್ನು ಸತ್ಪಜೆಗಳನ್ನಾಗಿ ಮಾಡಿದರೆ ಮಾತ್ರ ಅವನ ಜೀವನ ಸಾರ್ಥಕತೆವೆನಿಸುತ್ತದೆ. ಎಲ್ಲರೂ ಉತ್ತಮ ಶಿಕ್ಷಕರಾಗಲಾರರು. ಇದಕ್ಕೆ ತನ್ನದೇ ಆದ ಪಾವಿತ್ರತೆ ಇದೆ. ಇದು ಮುಖ್ಯ ಉದ್ಯೋಗಗಳಲ್ಲಿ ಒಂದು. ಆದರೆ ಇಂದು ಇದಕ್ಕೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ. ಶಿಕ್ಷಕರಿಗೆ ತಾಳ್ಮೆ, ಸ್ಥೈರ್ಯ, ಸೌಹಾರ್ದತೆಯ ಅಂಶಗಳಿರಬೇಕು. ಮುಂದಿನ ಪೀಳಿಗೆಯವರು ಶಿಕ್ಷಕ್ಷ-ವಿದ್ಯಾರ್ಥಿಯ ಸಂಬಂಧದ ಬೆಲೆ ಅರಿತು ಮುನ್ನಡೆಯಬೇಕು. ಒಳ್ಳೆಯ ಶಿಕ್ಷಕರಿಗೆ ಮನ್ನಣೆ ದೊರೆಯಬೇಕು.

ಇಂದು ಪಧವೀಧರರಾಗಿರುವ ಈ ಸಂಸ್ಥೆಯ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಅವರು, ಯಾವುದೇ ಕ್ಷೇತ್ರವನ್ನು ಉದ್ಯೋಗದಲ್ಲಿ ಆಯ್ಕೆ ಮಾಡಿಕೊಂಡರೂ, ಈ ಸಮಾಜವನ್ನು ಉತ್ತಮ ಸ್ಥಾನದಲ್ಲಿಡುವ ಪ್ರಯತ್ನ ಮಾಡಿ. ಇಂದು ಸ್ಥಳೀಯ, ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳಿವೆ. ಬಡತನ, ಹವಾಮಾನ ಬದಲಾವಣೆ ರೋಗರುಜಿನ ಹೀಗೆ ಇಂತಹ ಸವಾಲುಗಳನ್ನು ಸೈನಿಕರಂತೆ ಎದುರಿಸಿ ಮುನ್ನಡೆಯಿರಿ. ವಿಜ್ಞಾನ ಒಂದರಿಂದ ಮಾತ್ರ ಸಮಸ್ಯೆ ಪರಿಹಾರ ಹುಡುಕಬಹುದು. ಆದ್ದರಿಂದ ಮಾತ್ರ ಸಹಕಾರ, ಸಹಾನುಭೂತಿಯ ಮೌಲ್ಯಗಳನ್ನು ಬಳಸಿಕೊಂಡು ನಿಮ್ಮ ಜೀವನದಲ್ಲಿ ಜಯಶೀಲರಾಗಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯಪಾಲರಾದ ವಾಜುಭಾಯ್ ರೂಡಾಭಾಯಿ ವಾಲಾ, ಇಂದಿನ ಜೀವನಕ್ಕೆ ವಿಜ್ಞಾನದ ಅವಶ್ಯಕತೆ ಬಹಳವಿದೆ. ಇಸ್ರೋ ಸಂಸ್ಥೆ 104 ಉಪಗ್ರಹಗಳ ಉಡಾವಣೆ ಮಾಡಿದೆ. ಜಪಾನ್, ಇಸ್ರೇಲ್ ಉತ್ತರ ಕೊರಿಯಾ ಸಹ ಇದರಿಂದ ಪ್ರೇರಣೆ ಹೊಂದಿದೆ. ವಿಜ್ಞಾನದಲ್ಲಿ ಸಂಶೋಧನೆಗಳು ಹೆಚ್ಚು ಹೆಚ್ಚು ನಡೆಯಬೇಕು. ರಾಷ್ಟ್ರಕ್ಕೆ ಈ ಸಂಶೋಧನೆಯಿಂದ ಹೆಚ್ಚು ಪ್ರಯೋಜನವಾಗಿ, ವಿಶ್ವದಲ್ಲಿ ಭಾರತೀಯರು ಹೆಚ್ಚು ಜನಪ್ರಿಯವಾಗಬೇಕೆಂದರು.

ಘಟಿಕೋತ್ಸವ ವಿಜ್ಞಾನದಲ್ಲಿ 96 ಜನರಿಗೆ ಪದವಿ, 334 ಸ್ನಾತಕೋತ್ತರ ಪದವಿ, 309 ಡಾಕ್ಟರೇಟ್ ಪದವಿಗೆ ವಿದ್ಯಾರ್ಥಿಗಳು ಅರ್ಹವಾಗಿದ್ದಾರೆ.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ರಾಮರಾವ್, ನಿರ್ದೇಶಕರಾದ ಅನುರಾಗ್ ಕುಮಾರ್, ಡೀನ್‌ಗಳಾದ ಎಂ.ಕೆ. ಸೂರಪ್ಪ , ಅಂಜಲಿ ಕರ್ನಡೆ ಉಪಸ್ಥಿತರಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್.

# ಇಲಕಲ್ ನಗರಸಭೆಯ ವಾರ್ಡ್ ಸಂಖ್ಯೆ
# 13 ಮತ್ತು 24 ಉಪ ಚುನಾವಣೆ ರದ್ದು

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

**ರಾಜ್ಯ ಚುನಾವಣಾ ಆಯೋಗವು ದಿನಾಂಕ: 12–4–2017 ರಂದು 11 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ 14 ವಾರ್ಡುಗಳಿಗೆ ಹೊರಡಿಸಲಾಗಿದ್ದ ಆದೇಶದಲ್ಲಿ ಬಾಗಲಕೋಟೆ ಜಿಲ್ಲೆಯ, ಹುನಗುಂದ ತಾಲ್ಲೂಕಿನ ಇಲಕಲ್ ನಗರಸಭೆಯ ವಾರ್ಡ್ ನಂ 13 ಮತ್ತು 24 ಕ್ಕೆ ಸಂಬಂಧಿಸಿದಂತೆ ಮಾತ್ರ ಉಪ ಚುನಾವಣೆ ನಡೆಸಲು ಹೊರಡಿಸಲಾಗಿದ್ದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ**

**ಅಂತೆಯೇ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಇಲಕಲ್ ನಗರ ಸಭೆಯ ವಾರ್ಡ್ ನಂ 13 ಮತ್ತು 24 ಕ್ಕೆ ಹೊರಡಿಸಿದ್ದ ಮಾದರಿ ನೀತಿ ಸಂಹಿತೆಯನ್ನು ಸಹ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಉಪ ಚುನಾವಣೆಯನ್ನು ರದ್ದುಪಡಿಸಿದೆ.**

**ಎಸ್‌ಎಂ:ಜೆಡಿ:ಜಿಪಿಆರ್.**

**ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ವಸೂಲಿ:**
**ದೂರು ಸಲ್ಲಿಸಲು ಸಹಾಯವಾಣಿ ಸ್ಥಾಪನೆ**

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

**ರಾಜ್ಯದ ಖಾಸಗಿ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರವೇಶ ಪಡೆಯುವಾಗ ಸರ್ಕಾರವು ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಪಡೆಯುತ್ತಿದ್ದು, ಈ ಬಗ್ಗೆ ಸಂಘ ಸಂಸ್ಥೆಗಳು ಮತ್ತು ದಲಿತ ಮುಖಂಡರು ಹಾಘೂ ನೊಂದ ವಿದ್ಯಾರ್ಥಿಗಳಿಂದ ದೂರುಗಳು ಬರುತ್ತಿದ್ದು, ಈ ಸಂಬಂಧ ಹೆಚ್ಚಿನ ಶುಲ್ಕವನ್ನು ಪಡೆಯುವ ಕಾಲೇಜಿನ ವಿರುದ್ಧ ಅಗತ್ಯ ದಾಖಲೆಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆಯ ಕಂಟ್ರೋಲ್ ರೂಂ ನ ದೂರವಾಣಿ ಸಂಖ್ಯೆ 080 – 22634300 ಹಾಗೂ ಮೊಬೈಲ್ ಸಂಖ್ಯೆ: 9002400078 ಅನ್ನು ಸಂಪರ್ಕಿಸಬಹುದಾಗಿದೆ. ಅಥವಾ ಇಮೇಲ್ ವಿಳಾಸ swdcontrol@gmail.com ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.**

ಎಸ್‌ಎಂ:ಜೆಡಿ:ಜಿಪಿಆರ್.

# ಬಾಲಭವನದಲ್ಲಿ ಮಕ್ಕಳಿಗಾಗಿ
# ಎರಡು ದಿನದ ಕಲಾ ಕಾರ್ಯಾಗಾರ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

ಬಾಲ ಭವನವು 2017-18 ನೇ ಸಾಲಿನ ಕ್ರಿಯಾ ಯೋಜನೆಯಂತೆ, ಪ್ರತಿ ಮಗುವಿಗೆ ಕಲಿಯುವ ಹಕ್ಕು ಕಲ್ಪಿಸಲು ಹಾಗೂ ಸಾಂಸ್ಕೃತಿಕ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಕ್ಕಳಲ್ಲಿರುವ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಕಲೆಯ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದರೊಂದಿಗೆ ಕಲಾ ಅಭಿರುಚಿಯನ್ನು ಬೆಳಸಿಕೊಳ್ಳಲು ಸಹಕಾರಿಯಾಗುವಂತೆ, ಬಾಲ ಭವನದ ವತಿಯಿಂದ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಾದ ಯಕ್ಷಗಾನ, ಜಾನಪದ, ಶಾಸ್ತ್ರೀಯ ನೃತ್ಯ, ಸಂಗೀತ, ರಂಗಭೂಮಿ ಚಟುವಟಿಕೆಗಳು, ಸಾಹಿತ್ಯ, ಶಿಲ್ಪಕಲೆ, ಚಿತ್ರಕಲೆ, ವಿಜ್ಞಾನ ಇತ್ಯಾದಿ ಕ್ಷೇತ್ರಗಳನ್ನೊಳಗೊಂಡ ಕಾರ್ಯಾಗಾರವನ್ನು ಸಂಬಂಧಿಸಿದ ವಿಷಯದ ಉಪನ್ಯಾಸ, ಪ್ರಾತ್ಯಕ್ಷಿಕೆ ಹಾಗೂ ಕ್ರಿಯಾಶೀಲ ಚಟುವಟಿಕೆಯನ್ನು ಮಕ್ಕಳೊಂದಿಗೆ ಅನುಭವ ಹೊಂದಿದ ಸಂಪನ್ಮೂಲ ವ್ಯಕ್ತಗಳಿಂದ ನಡೆಸಲು ಯೋಜಿಸಿದೆ. ನಂತರದ ದಿನಗಳಲ್ಲಿ ಇದೇ ರೀತಿಯ ಕಾರ್ಯಾಗಾರಗಳನ್ನು ಬೆಂಗಳೂರು ಬಾಲ ಭವನವೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಶಾಲೆಯ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಸರ್ಕಾರಿ ಶಾಲೆ ಮತ್ತು ಸೌಲಭ್ಯ ವಂಚಿತ ಮಕ್ಕಳಿಗೂ ಸಹ ವಾರ್ಷಿಕ ಶಿಬಿರದ ಅಡಿಯಲ್ಲಿ ವಿಸ್ತರಿಸಲು ಉದ್ದೇಶಿಸಿದೆ.

ಬಾಲ ಭವನವು ಈ ಸಂಬಂಧ ಶಿಲ್ಪಕಲಾ ಮತ್ತು ಲಲಿತಕಲಾ ಅಕಾಡೆಮಿ ಹಾಗೂ ಇಸ್ರೇ ಸಂಸ್ಥೆಯ ಸಹಯೋಗದೊಂದಿಗೆ, ಬಾಲಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಜುಲೈ 8 ಮತ್ತು 9 ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ ಪ್ರಾಯೋಗಿಕವಾಗಿ ಎರಡು ದಿನಗಳ ಜಾನಪದ, ಜೇಡಿಮಣ್ಣಿನ ಕಲೆ, "ಜನಪದ ಸಾಂಝಿ ಕಾಗದ ಕತ್ತರಿ ಕಲೆ" ಹಾಗೂ ವಿಜ್ಞಾನ ಕಾರ್ಯಕ್ರಮಗಳಲ್ಲಿ 9 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ.

ಪ್ರತಿ ಚಟುವಟಿಕೆಗೆ 50 ಮಕ್ಕಳಿಗೆ ಮಾತ್ರ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಸರ್ಕಾರಿ ಶಾಲೆಯಲ್ಲಿ ಓದುತ್ತರುವ ಮತ್ತು ಸೌಲಭ್ಯ ವಂಚಿತ ಮಕ್ಕಳ ಪ್ರವೇಶಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಆಸಕ್ತ ಮಕ್ಕಳು ತಮ್ಮ ಹೆಸರುಗಳನ್ನು ಜುಲೈ 7 ರ ಒಳಗೆ ಮೊದಲು ಬಂದವರತಿಗೆ ಮೊದಲ ಆದ್ಯತೆ ಮೇರೆಗೆ ಬೆಳಿಗ್ಗೆ 11.00 ರಿಂದ ಸಂಜೆ 5.30 ರವರೆಗೆ ದೂರವಾಣಿ ಮೂಲಕ ನೋಂದಾಯಿಸಬಹುದು. (ರಜಾ ದಿನ ಹೊರತುಪಡಿಸಿ)

ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080–22864189/22851423 ರ ಕಚೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಸ್ಪರ್ಧಾತ್ಮಕ ಪರೀಕ್ಷೆ : ಕೀ ಉತ್ತರ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಪದವಿ ಮಟ್ಟದ ವಿದ್ಯಾರ್ಹತೆ ಹೊಂದಿರುವ ಎಲ್ಲಾ ತಾಂತ್ರಿಕೇತರ ಗ್ರೂಪ್ 'ಸಿ' ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯನ್ನು ಜೂನ್ 4 ರಂದು ನಡೆಸಲಾಗಿದ್ದು, ಈ ಪರೀಕ್ಷತೆಯ ಕೀ ಉತ್ತರಗಳನ್ನು ಆಯೋಗದ ವೆಬ್‌ಸೈಟ್ ನಲ್ಲಿ ಜುಲೈ 3 ರಂದು ಪ್ರಕಟಿಸಲಾಗಿದೆ.

ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳೂ ಪ್ರತಿ ಪ್ರಶ್ನೆಗೆ 50 ರೂ. ಗಳ ಐಪಿಓ/ಡಿಡಿ ಶುಲ್ಕವನ್ನು ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರ ಹೆಸರಿಗೆ ಸಂದಾಯವಾಗುವಂತೆ ಪಡೆದು ಅದರೊಂದಿಗೆ ಸರಿಯಾದ ಕೀ ಉತ್ತರಗಳನ್ನು ಪುಷ್ಠೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ವಿಷಯ ಪ್ರಶ್ನೆ ಪುಸ್ತಿಕೆಯ ಶ್ರೇಣಿ, ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುವ ನಮೂನೆಯಲ್ಲಿಯೇ ಭರ್ತಿಮಾಡಿ ಅಗತ್ಯ ದಾಖಲೆಗಳೊಂದಿಗೆ ದ್ವಿಪ್ರತಿಗಳಲ್ಲಿ ಕೀ ಉತ್ತರಗಳನ್ನು ಪ್ರಕಟಿಸಿದ ಏಳು ದಿನಗಳೊಳಗೆ ಆಯೋಗಕ್ಕೆ ತಲುಪುವಂತೆ ಸಲ್ಲಿಸತಕ್ಕದ್ದು. ಶುಲ್ಕ ಸಂದಾಯ ಮಾಡದ ಹಾಘೂ ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## DAK ADALAT

**Bengaluru, July 5 (Karnataka Information)**

**The Chief Postmaster General, Karnataka Postal Circle, No. 1, Beaulieu, Palace Road (Opposite Maharani's College of Science) Bengaluru – 560 001 will conduct a "DAK ADALAT" for**

**redressal of public grievances relating to Postal Services on 20th July at 3.00 PM.**

**Members of the Public and customers of Department of Posts in Bengaluru Region may address their grievances if any, to The Assistant Director (Postal Operations), office of the Chief Postmaster General , Karnataka Circle, Bengalureu – 560 001, so as to reach the officer latest by 12th July 2017.**

**Grievances can also be sent by email to tech.ka@indiapost.gov.in It is requested that brief and specific details with relevant facts and figures may please be furnished along with complete contact details to facilitate speedy redressal.**

**sm/jd/gpr.**